ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೆರಡನೆಯ ಅಧಿವೇಶನ
ಶುಕ್ರವಾರ, ದಿನಾಂಕ: 11ನೇ ಡಿಸೆಂಬರ್, 2020

ಪಂಚಾಯತ್ ಅಭಿವೃದ್ದಿ ಅಧಿಕಾರಿಗಳ ಜೇಷ್ಠತೆ ಬಗ್ಗೆ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-

443(693) ಮಾನ್ಯ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪಂಚಾಯತ್ ಅಭಿವೃದ್ದಿ ಅಧಿಕಾರಿಗಳ ಜೇಷ್ಠತೆ ಪಟ್ಟಿ ಬಗ್ಗೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ನೀಡಿದ ತೀರ್ಪಿನಂತೆ ಜೇಷ್ಠತೆಯಲ್ಲಿಯ ಅಂಶಗಳ ಕುರಿತು ಅಭಿಪ್ರಾಯ ನೀಡಲು ಸಮಿತಿಯನ್ನು ರಚಿಸಲಾಗಿದೆಯೇ; ರಚಿಸಿದ್ದಲ್ಲಿ ಆದೇಶ ಪ್ರತಿ ಒದಗಿಸುವುದು;

(ಆ) ಸದರಿ ಸಮಿತಿ ರಚನೆಯ ಉದ್ದೇಶಗಳು, ಕಾರ್ಯವ್ಯಾಪ್ತಿ ಹಾಗೂ ಅವಧಿಯ ವಿವರಗಳನ್ನು ಒದಗಿಸುವುದು;

(ಇ) ಈ ಸಮಿತಿಯು ಎಷ್ಟು ಭಾರಿ ಸಭೆ ಸೇರಿದೆ; (ಸಭೆ ಸೇರಿದ ದಿನಾಂಕ ಹಾಗೂ ಸಮಿತಿಯ ನಡವಳಿಗಳ ಹಾಗೂ ವರದಿಯ ಪ್ರತಿಗಳನ್ನು ಒದಗಿಸುವುದು)

(ಈ) ಸದರಿ ಸಮಿತಿಗೆ ಯಾವುದೇ ಅಂಶದ ಮೇಲೆ ನಿರ್ಣಯ ಕೈಗೊಳ್ಳಲು ಅಥವಾ ಅಭಿಪ್ರಾಯ ನೀಡಲು ಅಧಿಕಾರವಿದೆಯೇ;

(ಉ) ದಿನಾಂಕ:29-09-2020ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ದಿನಾಂಕ:06-06-2020ರಂದು ಸಮಿತಿಯ ನಿರ್ಣಯದಂತೆ ಎಂದು ನಮೂದಿಸಲಾಗಿದ್ದು, ದಿನಾಂಕ:06-06-2020ರಂದು ಯಾವ ಅಂಶದ ಮೇಲೆ ನಿರ್ಣಯ ಕೈಗೊಳ್ಳಲಾಗಿದೆ, ಹಾಗೂ ಸರ್ಕಾರದ ಯಾವ ನಿಯಮಗಳ ಅಡಿ ಸದರಿ ನಿರ್ಣಯ ಕೈಗೊಳ್ಳಲಾಗಿದೆ?ಸದರಿ ಸಭೆಗೆ ಹಾಜರಿದ್ದ ಸದಸ್ಯರು ಯಾರು? (ಸದಸ್ಯರ ರುಜುವುಳ್ಳ ನಿರ್ಣಯದ ಪ್ರತಿ ಒದಗಿಸುವುದು)